ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಕುಮಟಾ.

ಸಿಸಿ ನಂ. 157/2022

| | | |
|---|---|---|
| ಹೆಸರು | - | ವೆಂಕಟೇಶ |
| ತಂದೆಯ ಹೆಸರು | - | ತಿಮ್ಮಪ್ಪ ಅಂಬಿಗ |
| ವಯಸ್ಸು | - | 39 ವರ್ಷ |
| ಉದ್ಯೋಗ | - | ಮೀನುಗಾರಿಕೆ |
| ವಾಸ್ತವ್ಯ | - | ಸೌರಹಿತ್ಲು, ಮಾತಕೋಡ, ಹೊನ್ನಾವರ |

<u>– ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೆಚ್ಚುವರಿ ಹೇಳಿಕೆ –</u>

ಪ್ರಶ್ನೆ – 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದು ಕೊಂಡಿದ್ದೀರಾ?

ಉತ್ತರ –

**ಪ್ರಶ್ನೆ – 2** ಪಿ ಡಬ್ಲ್ಯೂ 2 - ಹರ್ಷ ಶೇಖರ ನಾಯಕ ಇವರು ತಮ್ಮ ಸಾಕ್ಷ್ಯದಲ್ಲಿ , ನೀವು ಮೀನುಗಾರಿಕಾ ವೃತ್ತಿ ಮಾಡುತ್ತಿದ್ದುದು ಇದ್ದು ಅವರು ಹರ್ಷ ಏಜನ್ಸಿಸ್ ಎಂಬ ಮೊಬೈಲ್ ಅಂಗಡಿಯ ಮಾಲಕನಿದ್ದು ಅವರು ಹಾಗೂ ನೀವು ಕಳೆದ 2-3 ವರ್ಷಗಳಿಂದ ಪರಿಚಯಸ್ತರಿದ್ದು ಬಹಳ ಆತ್ಮೀಯರಾಗಿರುತ್ತೇವೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 3** ಪಿಡಬ್ಲ್ಯೂ 2 – ಇವರು ಮುಂದುವರಿದು, ಹೀಗಿರುತ್ತಿರುವಲ್ಲಿ, ನೀವು ಅವರೊಂದಿಗಿನ ಪರಿಚಯನಾತೆಯಿಂದ ಹಾಗೂ ಸಲುಗೆಯಿಂದ 2018 ನೇ ವರ್ಷದ ಸಪ್ಟೆಂಬರ ತಿಂಗಳಲ್ಲಿ ಅವರ ಬಳಿ ಬಂದು ನಿಮ್ಮ ಮೀನುಗಾರಿಕಾ ವೃತ್ತಿಗಾಗಿ ನಿಮಗೆ ತುರ್ತಾಗಿ ರೂಪಾಯಿ

1,50,000/- ಹಣದ ಅವಶ್ಯಕತೆ ಇದೆ , ನಿಮ್ಮಕೈಯಲ್ಲಿ ಮೀನುಗಾರಿಕಾ ವೃತ್ತಿಗಾಗಿ ಈಗ ಅಷ್ಟೊಂದು ಹಣ ಇಲ್ಲ , ಕಾರಣ ನಿಮಗೆ ರೂ. 1,50,000/-ಹಣವನುನ ಈಗ ಕೊಢಿ ನೀವು ಪ್ರ ಹಣವನ್ನು 7-8 ತಿಂಗಳು ಕಳೆ ಬಳಿಕ ವಾಪಸ್ಸು ನೀಡುತ್ತೇನೆ ಎಂತಾ ಭರವಸೆ ನೀಡಿ ಪರಿಪರಿಯಾಗಿ ಕೇಳಿಕೊಂಡಿದ್ದಕ್ಕೆ ಅವರು ನಿಮ್ಮೊಂದಿಗಿನ ಪರಿಚಯನಾತೆಯಿಂದ ನಿಮಗೆ ರೂ. 1,50,000/-ಹಣವನ್ನು ಕೈಗಡವಾಗಿ ನೀಡಿದ್ದು ಇರುತ್ತದೆ ಎಂದು ಹೇಳಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

**<u>ಪ್ರಶ್ನೆ- 4</u>** ಪಿಡಬ್ಲ್ಯೂ 2 - ಇವರು ಮುಂದುವರಿದು, ತದನಂತರ 7-8 ತಿಂಗಳು ಕಳೆ ಬಳಿಕ ಅವರು ನಿಮ್ಮ ಬಳಿ ಬಂದು ಅವರು ನೀಡಿದ ಹಣವನ್ನು ವಾಪಸ್ಸು ನೀಡುವಂತೆ ಕೇಳಿದಾಗ ನೀವು ಇಂದಲ್ಲ ನಾಳೆ ಕೊಡುತ್ತೇನೆಂತಾ ಕಾಲಹರಣ ಮಾಡಿ ಬಂದಿದ್ದು ಕೊನೆಯದಾಗಿ ಅವರು 2019 ನೇ ಇಸ್ವಿಯ ನವೆಂಬರ ತಿಂಗಳಲ್ಲಿ ಭೇಟಿ ಮಾಡಿ ಅವರು ನೀಡಿದ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದಾಗ ನೀವು ನಿಮ್ಮ ಬಳಿ ಸಧ್ಯಕ್ಕೆ ನಗದು ಹಣ ಇಲ್ಲ , ನಿಮ್ಮ ಖ-ತೆ ಇರುವ ವಿಜಯಾ ಬ್ಯಾಂಕ್ , ಕಾಸಕೊಡ ಶಾಖೆ, ಹೊನ್ನಾವರ ಇದರಲ್ಲಿ ಸಾಕಷ್ಟು ಹಣ ಇದೆ , ಅಲ್ಲಿ ನಗದೀರಿಸಿಕೊಳ್ಳಿ ಎಂಬ ಭರವಸೆ ನೀಡಿ ಒಂದು ಚೆಕ್ ನ್ನು ರೂ . 1,50,000/-ಕ್ಕೆ ದಿಃ 19-11-2019 ಎಂದು ನಮೂದಿಸಿ ಬರವಣಿಗೆ ಮಾಡಿ ಸಹಿ ಮಾಡಿ ನನಗೆ ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

**<u>ಪ್ರಶ್ನೆ- 5</u>** ಪಿಡಬ್ಲ್ಯೂ 2 - ಇವರು ಮುಂದುವರಿದು, ಸದರಿ ಚೆಕ್ ನಂ . 870060 ಆಗಿರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ -</u>

**ಪ್ರಶ್ನೆ- 6** ಪಿಡಬ್ಲ್ಯೂ 2 – ಇವರು ಮುಂದುವರಿದು, ನಿಮ್ಮ ಮೇಲಿನ ವಿಶ್ವಾಸದಿಂದ ಅವರು ಸದರಿ ಚೆಕ್ ನ್ನು ಸ್ವೀಕರಿಸಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ –**

**ಪ್ರಶ್ನೆ- 7** ಪಿಡಬ್ಲ್ಯೂ 2 – ಇವರು ಮುಂದುವರಿದು, ಈ ಚೆಕ್ ನೀಡುವ ವೇಳೆಯಲ್ಲಿ ನೀವು ಚೆಕ್ ನ ಮೇಲೆ ನಮೂದಿಸಿದ ದಿನಾಂಕದಂದು ಖಾತೆಯಲ್ಲಿ ನಗದೀಕರಣಕ್ಕೆ ಸಾಕಾಗುವಷ್ಟು ಹಣ ಜಮಾ ಇಡುವುದಾಗಿ ಭರವಸೆ ಸಹ ನೀಡಿದ್ದನು ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ –**

**ಪ್ರಶ್ನೆ – 8** ಪಿ ಡಬ್ಲ್ಯೂ 2 – ರವರು ಮುಂದುವರೆದು , ಹೀಗಿರುತ್ತಾ ನಿಮ್ಮಿಂದ ಅವರಿಗೆ ಸಂದಾಯವಾಗತಕ್ಕ ಹಣವನ್ನು ಪಡೆದುಕೊಳ್ಳುವ ಸಲುವಾಗಿ ಅವರು ಸದರಿ ಚೆಕ್ ನ್ನು ಅವರ ಖಾತೆ ಇರುವ ಕೆನರಾ ಬ್ಯಾಂಕ್ , ಕುಮಟಾ ಶಾಖೆಗೆ ನಗದೀಕರಣಕ್ಕೆಂತಾ ಹಾಜರು ಪಡಿಸಿದಾಗ ಸದರ ಬ್ಯಾಂಕನವರು ನಿಮ್ಮ ಖಾತೆ ಇರುವ ವಿಜಯಾ ಬ್ಯಾಂಕ್ , ಕಾಸರಕೊಡ ಶಾಖೆಗೆ ಸದ್ರಿ ಚೆಕ್ ನ್ನು ನಗದೀಕರಣಕ್ಕೆಂತಾ ಕಳುಹಿಸಿದಾಗ ಸದ್ರಿ ಬ್ಯಾಂಕ್ ನವರು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂತಾ ಫಂಡ್ಸ ಇನಸಫೀಷಿಯಂಟ್ ಎಂಬ ಹಿಂಬರಹದೊಂದಿಗೆ ಚೆಕ್ ನ್ನು ಮೆಮೋದೊಂದಿಗೆ ದಿಃ 20-11-2019 ರಂದು ವಾಪಸ್ಸು ಕಳುಹಿಸಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ –**

**ಪ್ರಶ್ನೆ- 9** ಪಿಡಬ್ಲ್ಯೂ 2 – ಇವರು ಮುಂದುವರಿದು, ತದನಂತರ ಅವರು ತಮ್ಮ ವಕೀಲರ ಮುಖಾಂತರ ನಿಮಗೆ ನೋಂದಾಯಿತ ಅಂಚೆಯ ಮೂಲಕ ನೋಟಿಸು ನೀಡಿ ತಿಳಿಸಿದ್ದು ಸದ್ರಿ ನೋಟಿಸು ನಿಮಗೆ ದಿಃ 18-01-2020 ರಂದು ಜಾರಿಯಾಗಿದ್ದು, ಸದ್ರಿ ನೋಟಿಸಿಗೆ ನೀವು ಯಾವುದೇ ಉತ್ತರ ನೀಡಿದ್ದಾಗಲೀ ಹಾಗೂ ನನ್ನಿಂದ ಪಡೆದುಕೊಂಡ

ಹಣವನ್ನಾಗಲೀ ಈವರೆಗೂ ಹಿಂದಿರುಗಿಸಿದ್ದಾಗಲೀ ಇರುವುದಿಲ್ಲ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 10** ಪಿಡಬ್ಲ್ಯೂ 2 – ಇವರು ಮುಂದುವರಿದು, ನೀವು ಅವರಿಂದ ಪಡೆದ ಹಣದ ಮರುಪಾವತಿಗಾಗಿ ನೋಟಿಸಿನಲ್ಲಿ ಹೇಳಿದ ಚೆಕ್ ನ್ನು ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 11** ಪಿಡಬ್ಲ್ಯೂ 2 – ಇವರು ಮುಂದುವರಿದು, ಅವರು ನಿಮಗೆ ಹಣ ನೀಡುವ ಸಂದರ್ಭದಲ್ಲಿ ಆರ್ಥಿಕವಾಗಿ ಸಬಲನಾಗಿದ್ದೆನು ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 12** ಪಿಡಬ್ಲ್ಯೂ 2 – ಇವರು ಮುಂದುವರಿದು, ಅವರಿಗೆ ಮೋಸ ಪಡಿಸುವ ದುರುದ್ದೇಶದಿಂದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂತಾ ಗೊತ್ತಿರುತ್ತಾ ಬುದ್ಧ್ಯಾ ಬೋಗಸ್ ಚೆಕ್ ನೀಡಿ ಮಾತಿನಂತೆ ಖಾತೆಯಲ್ಲಿ ಹಣ ಜಮಾ ಇಡದೇ ಅವರಿಗೆ ಮೋಸ ಪಡಿಸಿರುತ್ತಾನೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 13** ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರ –

**ಪ್ರಶ್ನೆ – 14** ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 09-02-2026.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ